**ದಿನಾಂಕಃ 24.10.2024 ರಂದು ಕರೆಯಿಸಿ ಪುನಃ ಪ್ರಮಾಣ ವಚನ ಭೋಧಿಸಲಾಯಿತು ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಆರ್ ಕೆ ವಕೀಲರಿಂದ ರವರಿಂದ**

ನಾನು ಹುಟ್ಟಿ ಬೆಳೆದಿರುವುದು ಇಡುವಾಣಿ ಗ್ರಾಮದಲ್ಲಿ ಎಂದರೆಸರಿಯಲ್ಲ. ತಳಕಳಲೆ ಎಂದು ಉತ್ತರಿಸುತ್ತಾರೆ. ಇಡುವಾಣಿ ಗ್ರಾಮದಲ್ಲಿ ಎಷ್ಟು ವರ್ಷದಿಂದ ವಾಸವಾಗಿದ್ದೇನೆ ಎಂದು ನನಗೆ ನೆನಪಿಲ್ಲ. ತಳಕಳಲೆಯಲ್ಲಿ ಇರುವಾಗ ನನಗೆ 10 ವರ್ಷ ವಯಸ್ಸು ಆಗಿತ್ತು. ಇಡುವಾಣಿ ಮಂಜ ನನ್ನ ಸಂಬಂಧಿಕರು ಅಲ್ಲ ಊರು ಮನೆಯವರು. ನನ್ನ ತಂದೆ ಎಷ್ಟನೇ ಇಸವಿ ವರಗೆ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ ಸಾಕ್ಷಿ ಮುಂದುವರೆದು ನನ್ನ ತಂದೆಗೆ ಪ್ಸಾರ್ಶ್ವವಾಯು ಆಗುವವರೆಗೂ ನೋಡಿಕೊಳ್ಳುತ್ತಿದ್ದರು. ನನ್ನ ತಂದೆಗೆ ಪ್ಸಾರ್ಶ್ವವಾಯು ಆಗಿರಲ್ಲಿಲ್ಲ ಹಾಗೂ ಅವರು ಸಾಯುವ 15 ದಿನಗಳ ಹಿಂದಿನವರೆಗೂ ಅವರೇ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆಸರಿಯಲ್ಲ.

ಇಡುವಾಣಿ ಇರುವ ನನ್ನ ಮನೆ ಆಶ್ರಯ ಯೋಜನೆಯದ್ದು. ಪ್ರತಿವಾದಿ ವಾಸವಾಗಿರುವುದು ಆಶ್ರಯ ಯೋಜನೆ ಮನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಮನೆ ಕಟ್ಟುವ 2 ವರ್ಷಗಳ ಮೊದಲು ಪ್ರತಿವಾದಿ ಮನೆ ಕಟ್ಟಿರುತ್ತಾರೆ. ನಾನು ಮನೆ ಕಟ್ಟಿ 21 ವರ್ಷ ಆಗಿರುತ್ತದೆ. ಪ್ರತಿವಾದಿ ಶೆಡ್ಯೂಲ್ ನ 1 ನೇ ಸ್ವತ್ತನ್ನು ವಿಲ್ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆಸರಿ. ವಿಲ್ ಆಧಾರದ ಮೇಲೆ ಪ್ರತಿವಾದಿ ಖಾತೆ ಮಾಡಿಕೊಳ್ಳುತ್ತಿದ್ದಾರೆ ಎಂದು ನನಗೆ ಇಡುವಾಣಿ ಮಂಜ ಹೇಳಿರುತ್ತಾರೆ. ದಾವಾ ಶೆಡ್ಯೂಲಿನ 2 ನೇ ಸ್ವತ್ತು 1 ನೇ ಸ್ವತ್ತಿನ ಒಳಭಾಗದಲ್ಲೇ ಬರುತ್ತದೆ. ವಿಲ್ ಆಧಾರದ ಮೇಲೆ ಪ್ರತಿವಾದಿಯೇ ದಾವಾ ಸ್ವತ್ತಿಗಳಿಗೆ ಖಾತೆ ಮಾಡಿಸಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದರೆಸರಿ. ಸಾಕ್ಷಿ ಮುಂದುವರೆದು ವಿಲ್ ಆಗುವ ಮೊದಲು ನಾವು ಸ್ವಾಧೀನದಲ್ಲಿ ಇದ್ದೆವು ಎಂದು ಉತ್ತರಿಸುತ್ತಾರೆ. ನನ್ನ ಹಾಗೂ ನನ್ನ ಉಳಿದ ಸಹೋದರ ಸಹೋದರಿಯರ ಮೇಲೆ ಪ್ರತಿವಾದಿ ಹಾಕಿರುವ ಇನ್ನೊಂದು ದಾವೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ ನನ್ನ ತಮ್ಮನಿಗೆ ಗೊತ್ತಿರಬಹುದು ಎಂದು ಉತ್ತರಿಸುತ್ತಾರೆ. ಆ ಕೇಸಗೆ ಮಾಹಿತಿಯನ್ನು ನಾನು ಕೊಟ್ಟಿರುವುದಿಲ್ಲ ನನ್ನ ತಮ್ಮ ಕೊಟ್ಟಿರುತ್ತಾನೆ. ನನ್ನ ತಮ್ಮ ಬೆಂಗಳೂರಿನಲ್ಲಿ ಹಾಗೂ ನನ್ನ ತಂಗಿ ಮದುವೆಯಾದ ಬಳಿಕ ಗಂಡನ ಮನೆಯಲ್ಲಿ ಬಹಳ ವರ್ಷಗಳಿಂದ ವಾಸವಾಗಿದ್ದಾರೆ ಎಂದರೆಸರಿ.

ನನ್ನ ತಂದೆ ವಿಲ್ ಮಾಡಿದ ಬಗ್ಗೆ ನನ್ನ ತಂದೆಯ ಬಳಿ ಯಾಕೆ ಪ್ರತಿವಾದಿಯ ಹೆಸರಿಗೆ ಮಾಡಿದ್ದೀರಿ ಎಂದು ಕೇಳಿರುವುದಿಲ್ಲ ಎಕೆಂದರೆ ನನ್ನ ತಂದೆಯ ಮರಣದ ಬಳಿಕ ವಿಲ್ ವಿಚಾರ ಗೊತ್ತಾಗಿರುತ್ತದೆ. ನನ್ನ ತಂದೆಯ ಬಳಿ ನನ್ನ ತಮ್ಮ ಆಗಲೀ, ನನ್ನ ತಂಗಿಯಾಗಲೀ ವಿಲ್ ವಿಚಾರ ಕೇಳಿದ್ದಾರೋ ಇಲ್ಲವೋ ಎಂದು ನನಗೆ ಮಾಹಿತಿ ಇರುವುದಿಲ್ಲ. ದಾವಾ ಸ್ವತ್ತಿನ 1 ನೇ ಶೆಡ್ಯೂಲ್ ನ ಚೆಕ್ಕುಬಂಧಿ ಪೂರ್ವಕ್ಕೆ ಜಯಮ್ಮ ಮತ್ತು ಚಂದ್ರು ಇದ್ದಾರೆ, ಪಶ್ಚಿಮಕ್ಕೆ ಬೀರಪ್ಪ ನವರ ಜಮೀನು ತೋಟ , ಉತ್ತರಕ್ಕೆ ನಮ್ಮ ಜಮೀನು ಹಾಗೂ ತೋಟ ದಕ್ಷಿಣಕ್ಕೆ ಮನೆ ಇದೆ. ದಕ್ಷಿಣಕ್ಕೆ ಇರುವ ಮನೆ ಪ್ರತಿವಾದಿ ಇರುವ ಮನೆ ಎಂದರೆಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ